# ಸರಣಿ ಚಿತ್ರಗಳ ಖಯಾಲಿ!

ಬಾಲಿವುಡ್‌ನ ಈ ವರ್ಷವಿಡೀ ಹಳೆಯ ಸಿನಿಮಾಗಳ ಗುಂಗಿನಲ್ಲೇ ಬದುಕುವಂತಿದೆ. ಈ ವರ್ಷ ಬರಲಿರುವ ಚಿತ್ರಗಳ ಪಟ್ಟಿಯನ್ನು ನೋಡಿದರೆ, ಹಿಂದೆ ಸೂಪರ್‌ಹಿಟ್ ಆದ ಚಿತ್ರಗಳದ್ದೇ ಎರಡನೇ ಭಾಗವನ್ನು ಮತ್ತೆ ನಿರ್ಮಿಸುವ, ಅದೇ ರೀತಿಯ ಚಿತ್ರಕಥೆ ಹೆಣೆಯುವ ಪ್ರಯತ್ನದಲ್ಲೇ ಬಹುತೇಕ ತಾರೆಯರು, ನಿರ್ಮಾಪಕರು ತೊಡಗಿದ್ದಾರೆ. ಹೊಸತನದ ಕಥೆ ಹೆಣೆಯುವ, ಹೊಸ ರೀತಿಯಲ್ಲಿ ಚಿತ್ರ ನಿರ್ಮಿಸುವ ಸಾಹಸದ ಬದಲಿಗೆ ಪ್ರೇಕ್ಷಕರ ಜೇಬಿನತ್ತಲೇ ಕಣ್ಣು ನೆಟ್ಟ ಚಿತ್ರಗಳ ಸಂಖ್ಯೆಯೇ ಈ ವರ್ಷ ಹೆಚ್ಚು ಇದ್ದಂತಿದೆ. ಎಲ್ಲೋ ಕೆಲವು ನಿರ್ಮಾಪಕರು ಕಹಾನಿ, ಭಾಗ್ ಮಿಲ್ಖಾ ಭಾಗ್, ಇಶ್ಕ್‌ಜಾದೆ ಮುಂತಾಗಿ ಹೊಸ ರೀತಿಯ ಪ್ರಯತ್ನಗಳನ್ನು ಮಾಡಿರುವುದು ಬಿಟ್ಟರೆ ಉಳಿದವರದ್ದೆಲ್ಲ ಹಳೇ ಸಕ್ಸೆಸ್ ಸ್ಟೋರಿಗಳೇ ಹೆಚ್ಚು. ಹಳೇ ಸಿನಿಮಾದ ಎರಡನೇ ಭಾಗ, ಮೂರನೇ ಭಾಗ ಮಾಡುವವರಂತೂ ಕ್ಯೂನಲ್ಲಿ ನಿಂತುಕೊಂಡಿದ್ದಾರೆ.

ವರ್ಷದ ಆರಂಭದಲ್ಲಿ ತೆರೆಕಂಡ 'ಅಗ್ನಿಪಥ್' ರಿಮೇಕ್ ಚಿತ್ರ. ಬಹಳ ವರ್ಷಗಳ ಹಿಂದೆ ಅಮಿತಾಭ್ ನಟಿಸಿದ್ದ ಸೂಪರ್‌ಹಿಟ್ ಚಿತ್ರವನ್ನು ಮತ್ತೆ ವಿಭಿನ್ನವಾಗಿ ತೆರೆಗೆ ತಂದಿರುವುದೇನೋ ನಿಜ. ಖಳನಾಯಕನಾಗಿ ಈ ಚಿತ್ರದಲ್ಲಿ ವಿಜೃಂಭಿಸಿದ ಸಂಜಯ್‌ದತ್ ತನ್ನ ಕಾಲ್‌ಶೀಟ್ ರೇಟ್ ಏರಿಸಿಕೊಂಡದ್ದಷ್ಟೆ ಈ ಚಿತ್ರದಿಂದ ಆದ ಲಾಭ. ಈಗಾಗಲೆ ಹೌಸ್‌ಫುಲ್–2, ಜನ್ನತ್–2 ಬಿಡುಗಡೆಯಾಗಿದೆ. ಬರಲಿರುವ ಚಿತ್ರಗಳ ಪಟ್ಟಿಯಲ್ಲಿ ಕ್ಯಾ ಕೂಲ್ ಹೈ ಹಮ್–2, ರೇಸ್–2, ದಭಾಂಗ್–2, ದೋಸ್ತಾನಾ–2, ಮಾಲಾಮಾಲ್ ವೀಕ್ಲಿ–2, ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ–2.... ಹೀಗೆ ಯಶಸ್ವಿ ಚಿತ್ರಗಳ 2ನೇ ಭಾಗ ಬೆಳೆಯುತ್ತದೆ! ಇದರ ನಡುವೆ ಹೇರಾಫೇರಿ ಎಂಬ ಕಾಮಿಡಿ ಚಿತ್ರದ ನೆರಳಲ್ಲೇ 'ಇಂಟರ್‌ನ್ಯಾಷನಲ್ ಹೇರಾಫೇರಿ' ಎಂಬ ಚಿತ್ರ ಸಿದ್ಧವಾಗುತ್ತಿದೆ. ಅಕ್ಷಯ ಕುಮಾರ್‌ನ ಖಿಲಾಡಿ.. ಚಿತ್ರಗಳ ಮುಂದುವರೆದ ಭಾಗದಂತೆ 'ಖಿಲಾಡಿ 786' ಇದೆ. ಟಾರ್ಜಾನ್ ಬೇರೆ 'ರಿಟರ್ನ್ ಆಫ್ ಟಾರ್ಜಾನ್' ಎಂಬ ಹೆಸರಿನಲ್ಲಿ ಮರಳಿ ಬರುತ್ತಿದ್ದಾನೆ. ಸಂಗೀತ– ಥ್ರಿಲ್ಲರ್ ಕಥೆಯಿಂದ ಗಮನ ಸೆಳೆದ 'ರಾಝ್' ಚಿತ್ರದ ಎರಡು ಭಾಗಗಳು ಮುಗಿದಿದ್ದು, ಈ ವರ್ಷ 'ರಾಝ್–3' ಬಿಡುಗಡೆ ಆಗಲಿದೆ!

ಕಳೆದ ವರ್ಷ ಹೊಸ ನಿರ್ದೇಶಕರು, ಹೊಸ ಪ್ರಯತ್ನಗಳ ಸಂಖ್ಯೆ ಹೆಚ್ಚಿತ್ತು. ಸಾಕಷ್ಟು ಹೊಸಬರ ಚಿತ್ರಗಳು ಮಾರ್ಕೆಟ್‌ನಲ್ಲಿ ಒಳ್ಳೆಯ ಲಾಭವನ್ನೇ ತಂದಿವೆ. ಇವರದ್ದು ನೂರಾರು ಕೋಟಿಗಳ ವ್ಯಾಪಾರವಲ್ಲ, 4–5 ಕೋಟಿಗಳ ಸಣ್ಣ ಬಜೆಟ್‌ನಲ್ಲಿ ಹೊಸ ಬಗೆಯ ಚಿತ್ರಗಳನ್ನು ನಿರ್ಮಿಸಿ 12–14 ಕೋಟಿ ಬಾಚಿಕೊಂಡವರಿದ್ದಾರೆ. ಇಂತಹ ಚಿತ್ರಗಳಿಂದಲೇ ಬಾಲಿವುಡ್ 2011ರಲ್ಲಿ ಹೊಸ ಚೈತನ್ಯ ತುಂಬಿಕೊಂಡಿತ್ತು. ಆದರೆ ಈ ಸಲ ಅಂತಹ ಸೂಚನೆಗಳು ಕಾಣಿಸುತ್ತಿಲ್ಲ. ಅಕ್ಷಯ ಕುಮಾರನಂತಹ ದೊಡ್ಡ ಬಜೆಟ್ ನಟರೂ ಅದೇ ಚರ್ವಿತ ಚರ್ವಣ ರೌಡಿ ರಾಠೋಡ್, ಖಿಲಾಡಿ ಮುಂತಾದ ಚಿತ್ರಗಳ ಮೊರೆ ಹೋಗಿದ್ದಾರೆ.

ಇದೆಲ್ಲ ಏನನ್ನು ಸೂಚಿಸುತ್ತದೆ? ಬಾಲಿವುಡ್‌ನಲ್ಲಿ ನಿರ್ದೇಶಕರ ಸೃಜನಶೀಲತೆ ಬತ್ತಿ ಹೋಗಿದೆಯೆ? ಅಥವಾ ನಿರ್ಮಾಪಕರು ಕೇವಲ ಹಣ ಮಾಡುವುದಷ್ಟೇ ನಮ್ಮ ಗುರಿ ಎಂದು ನಿರ್ಧರಿಸಿದ್ದಾರೆಯೆ?


■ ಬಿಂದು



ವಿದ್ಯಾ ಬಾಲನ್



ಫರ್ಹಾನ್ ಅಖ್ತರ್




ಬರಲಿದೆ ಭಾಗ 2